# ಅಖಿಲ ಭಾರತ ಅಂತರ್ ಎನ್‌ಐಟಿ ಕ್ರೀಡಾಕೂಟ: ಸುರತ್ಕಲ್ ತಂಡಕ್ಕೆ ಚಿನ್ನ, ಕಂಚಿನ ಪದಕ




**ಸುರತ್ಕಲ್, ಜ. 15:** ಅಖಿಲ ಭಾರತ ಅಂತರ ಎನ್‌ಐಟಿ 2023–24ನೇ ಸಾಲಿನ ಕ್ರೀಡಾಕೂಟದಲ್ಲಿ ಸುರತ್ಕಲ್ ತಂಡ ಹಾಕಿ ಚಿನ್ನ ಮತ್ತು ಕ್ರಿಕೆಟ್ ಕೂಟದಲ್ಲಿ ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿದೆ.

ಪಂದ್ಯಾವಳಿಯು ತಮಿಳುನಾಡಿನ ಎನ್‌ಐಟಿ ತಿರುಚ್ಚಿಯಲ್ಲಿ ಜ. 5ರಿಂದ 8ರ ವರೆಗೆ ನಡೆಯಿತು. ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಭಾಗವಹಿಸಿದ 9 ಎನ್‌ಐಟಿಗಳಲ್ಲಿ ಎನ್‌ಐಟಿಕೆ ಸುರತ್ಕಲ್ ವಿಜಯಶಾಲಿಯಾಗಿ ಹೊರಹೊಮ್ಮಿತು.

ಲೀಗ್ ಕಮ್ ನಾಕೌಟ್ ಆಧಾರದ ಮೇಲೆ ನಡೆದ ಪಂದ್ಯಗಳು ಎನ್‌ಐಟಿಕೆ ಸುರತ್ಕಲ್ ಚಿನ್ನದ ಪದಕ ಪಡೆಯುದರೊಂದಿಗೆ ಮುಕ್ತಾಯಗೊಂಡಿತು.

ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಎನ್‌ಐಟಿಕೆ ಸುರತ್ಕಲ್ ತಂಡ 2ನೇ ರನ್ನರ್ ಅಪ್ ಸ್ಥಾನ ಪಡೆದು ಕಂಚಿನ ಪದಕ ತನ್ನದಾಗಿಸಿಕೊಂಡಿತು.

ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಮತ್ತು ಭಾರತೀಯ ರಾಷ್ಟ್ರೀಯ ಆ್ಯತ್ಲೆಟಿಕ್ ತಂಡದ ಮುಖ್ಯ ತರಬೇತುದಾರ ಪಿ. ರಾಧಾಕೃಷ್ಣನ್ ನಾಯರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಎನ್‌ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಅವರು ವಿಜೇತರಾದ ಎನ್‌ಐಟಿಕೆಗಳ ಅತ್ಯುತ್ತಮ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

Uadayavani, Date:16/01/24, p.no - 02 Sudina